ಪೂರ್ವಭಾವಿ ವಿನ್ಯಾಸ ಯೋಜನೆಯ ಆರ್ಥಿಕ ಅಂದಾಜು ಇತ್ಯಾದಿ ತಯಾರಿಸಲು ಪರಿಣಿತರಿಂದ ಬಿಡ್ ಆಹ್ವಾನಿಸಲಾಗಿದೆ. ಕಿಮೀ 341.00 ರಿಂದ 343.00 (ಬಳ್ಳಾರಿ ಪಟ್ಟಣ ಪರಿಮಿತಿ) ರಲ್ಲಿ ನಾಲ್ಕು ಪಥದ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ.

ಸೋಲಾಪುರ–ಚಿತ್ರದುರ್ಗ ರಾಹೆ–13 ರ ಕಿಮೀ 100.00 ರಿಂದ 290.00 ರವರೆಗಿನ (ಬಿಜಾಪುರ–ಹೊಸಪೇಟೆ) ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸಲು ಕೇಂದ್ರ ಭೂ ಸಾರಿಗೆ ಮಂತ್ರಾಲಯವು ಪರಿಗಣಿಸಿದ್ದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಸರ್ವೆ ಕೆಲವು ಪ್ರಗತಿಯಲ್ಲಿದೆ. ಬಿಜಾಪುರ ಹುಬ್ಬಳ್ಳಿ ರಾಹೆ–218 ರಸ್ತೆಯು ಕಿಮೀ 190.00 ರಿಂದ ಕಿಮೀ 192 ರವರೆಗೆ ಈಗಾಗಲೇ 4 ಪಥದ ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ.

309 (641) ಶ್ರೀ ಬಸವರಾಜ ಭೀಮಪ್ಪ ಹಿತ್ನಾಳ್ ಕೆ. (ಕೊಪ್ಪಳ) ಮತ್ತು ಶ್ರೀ ಬಸವರಾಜ ರಾಯರೆಡ್ಡಿ (ಯಲಬರ್ಗಾ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ಹಂತದ ಅಧಿಕಾರಿಗಳ ಮೇಲಿನ ಭ್ರಷ್ಟಾಚಾರ ಹಾಗೂ ವಿವಿಧ ದೂರಿನನ್ವಯ ಎಷ್ಟು ಅಧಿಕಾರಿ ಹಾಗೂ ನೌಕರರನ್ನು ಅಮಾನತ್ತಿನಲ್ಲಿಡಲಾಗಿದೆ;

ಆ) ಇವರುಗಳ ಮೇಲೆ ಯಾವ ರೀತಿ ಇಲಾಖಾ ಮಟ್ಟದ ವಿಚಾರಣೆಯನ್ನು ನಡೆಸಲಾಗುತ್ತಿದೆ; ಇವುಗಳನ್ನು ಶೀಘ್ರವಾಗಿ ಮುಗಿಸಿ ತಪ್ಪಿತಸ್ಥರಿಗೆ ಕಾನೂನು ರೀತ್ಯ ಕ್ರಮ ಜರುಗಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಇ) ಇಲಾಖಾ ವಿಚಾರಣೆಯು ಸಮಯಕ್ಕೆ ಸರಿಯಾಗಿ ಪೂರ್ಣ ಗೊಳ್ಳದೆ ಇದ್ದಲ್ಲಿ ವಿಚಾರಣಾಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು?

ಶ್ರೀ ಹೆಚ್.ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಂದರೆ 2004ರಿಂದ 2006ರ ಅಂತ್ಯಕ್ಕೆ (ಅ) ಭ್ರಷ್ಟಾಚಾರದ ದೂರಿನನ್ವಯ 7 ಅಧಿಕಾರಿಗಳು ಮತ್ತು 3 ನೌಕರರನ್ನು ಮತ್ತು (ಆ) ವಿವಿಧ ದೂರಿನನ್ವಯ 3 ಅಧಿಕಾರಿಗಳು ಮತ್ತು 6 ನೌಕರರನ್ನು ಅಮಾನತ್ತುಗೊಳಿಸಲಾಗಿದೆ.

ಆ) ಭ್ರಷ್ಟಾಚಾರದ ಆರೋಪ ಹೊತ್ತಿರುವ ಮತ್ತು ಲೋಕಾಯುಕ್ತ ಕಛೇರಿಯ ತನಿಖೆಯಿಂದ ಆರೋಪ ಹೊತ್ತಿರುವ ಅಧಿಕಾರಿ: ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಲೋಕಾಯುಕ್ತ: ಉಪಲೋಕಾಯುಕ್ತರವರಿಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 14ಎ ರನ್ವಯ ವಹಿಸಲಾಗುತ್ತಿದೆ.

ವಿವಿಧ ದೂರಿನ ಆರೋಪ ಹೊತ್ತಿರುವ ಅಧಿಕಾರಿ: ನೌಕರರ ವಿರುದ್ಧ ಆರೋಪದ ಗಂಭೀರತೆಗನುಗುಣವಾಗಿ ಮೇಲಿನ ನಿಯಮಗಳ ನಿಯಮ 11 ಅಥವಾ 12ರ ಅನ್ವಯ ಇಲಾಖಾ ವಿಚಾರಣೆಯನ್ನು ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರು ಅಥವಾ ಇಲಾಖಾ ಅಧಿಕಾರಿಗಳನ್ನು ನೇಮಿಸಲಾಗುತ್ತಿದೆ.

ಇಲಾಖಾ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ವರದಿ ಸಲ್ಲಿಸಲು ಸೂಚಿಸಲಾಗುತ್ತದೆ. ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರವು ಪರಿಶೀಲಿಸಿ ಸಾಬೀತಾದ ಆರೋಪದ ಗಂಭಿರತೆಗನುಗುಣವಾಗಿ ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲಾಖಾ ವಿಚಾರಣೆಯು ಅರೆನ್ಯಾಯಿಕ ಕ್ರಮ ವಾಗಿರುತ್ತದೆ. ಸಮಯಕ್ಕೆ ಸರಿಯಾಗಿ ವಿಚಾರಣೆಯನ್ನು ಪೂರ್ಣಗೊಳಿಸದಿರುವ ವಿಚಾರಣಾಧಿಕಾರಿಗಳಿಗೆ ಮೇಲಿಂದ ಮೇಲೆ ನೆನಪೋಲೆಗಳನ್ನು ಹೊರಡಿಸಿ ಅದನ್ನು ತ್ವರಿತವಾಗಿ ವಿಚಾರಣೆಯನ್ನು ಪೂರ್ಣಗೊಳಿಸಿ ವರದಿಯನ್ನು ನೀಡುವಂತೆ ಒತ್ತಾಯಿಸಲಾಗುವುದು.